ನಿಜವಾಗಲೂ ನಮ್ಮ ಅದೃಷ್ಟವೆನ್ನಬೇಕು!'

'ನನಗೂ ಹಾಗೇ ಅನ್ನಿಸುತ್ತಿದೆ ಬಿಲ್ಲ್. ನಿಜ, ಜುಜುಬಿ ಇನ್ನೂರೈವತ್ತು ಡಾಲರುಗಳು ಏನೂ ಅಲ್ಲ!'

ಜಾನಿಯ ತಂದೆ ಅವನಿಗೊಂದು ಹೊಸ ರೈಫಲನ್ನು ತಂದಿದ್ದಾರೆ ಮತ್ತು ನಾವು ರಾತ್ರಿ ಕರಡಿ ಬೇಟೆಗೆ ಹೊರಟಿದ್ದೇವೆಂದು ಜಾನಿಯನ್ನು ಪುಸಲಾಯಿಸಿ ಅವನನ್ನು ಮನೆಗೆ ತಂದು ಒಪ್ಪಿಸಿದೆವು. ಬಿಲ್ಲ್ ಇನ್ನೂರೈವತ್ತು ಡಾಲರುಗಳನ್ನು ಎಣಿಸಿ ಎಬೆನೆಜರನ ಕೈಗಿತ್ತ.

ನಾವು ಅವನನ್ನು ಬಿಟ್ಟು ಹೊರಡುತ್ತಿದ್ದೇವೆಂದು ಗೊತ್ತಾಗುತ್ತಿದ್ದಂತೆ ಜಾನಿ ಅರಚುತ್ತಾ ಬಿಲ್ಲ್‌ನ ಕಾಲುಗಳಿಗೆ ಗಂಟು ಬಿದ್ದ. ಅವನನ್ನು ಬಿಡಿಸಿಕೊಳ್ಳುವುದು ಅವನ ತಂದೆಗೆ ಸಾಕು ಸಾಕಾಯಿತು.

## 12

'ನೀವು ಅವನನ್ನು ಎಷ್ಟೊತ್ತು ಹಿಡಿದಿಟ್ಟುಕೊಳ್ಳಬಲ್ಲಿರಿ?' ಬಿಲ್ಲ್ ಕೇಳಿದ.

'ಹೆಚ್ಚೆಂದರೆ ಹತ್ತು ನಿಮಿಷ. ನನಗೀಗ ಮೊದಲಿನ ತ್ರಾಣ ಇಲ್ಲ ಕಣಪ್ಪ!' ಎಬೆನೆಜರ್ ಹೇಳಿದ.

'ಬೇಕಾದಷ್ಟಾಯ್ತು! ಅಷ್ಟೊತ್ತಿಗೆ ನಾವು ಕೆನಡಾದ ಗಡಿ ತಲುಪಿರುತ್ತೇವೆ!' ಬಿಲ್ಲ್ ಹೇಳಿದ.

ನಾವು ಓಡಲು ಶುರುವಿಟ್ಟುಕೊಂಡೆವು.

ಹೊಟ್ಟೆ ಡುಮ್ಮ ಬಿಲ್ಲ್ ನನಗಿಂತ ಅರ್ಧ ಮೈಲು ಮುಂದೆ ಓಡುತ್ತಿದ್ದ!

## ಓ. ಹೆನ್ರಿ (1862–1910)

ಓ. ಹೆನ್ರಿ ಹೆಸರಿನಿಂದ ಚಿರಪರಿಚಿತನಾಗಿರುವ ಅಮೆರಿಕದ ಲೇಖಕ ವಿಲಿಯಂ ಸಿಡ್ನಿ ಪೋರ್ಟರ್ ತನ್ನ ಹಾಸ್ಯ ಮಿಶ್ರಿತ ವಿಲಕ್ಷಣ ತಿರುವು ಕೊಡುವ ಕತೆಗಳಿಗೆ ಹೆಸರುವಾಸಿ. ಔಷಧ ರಸಾಯನ ಶಾಸ್ತ್ರ ಕಲಿತ ಅವನು ಬ್ಯಾಂಕ್ ನೌಕರಿಗೆ ಸೇರಿ ಬ್ಯಾಂಕಿನಿಂದ ದುಡ್ಡು ಲಪಟಾಯಿಸಿರುವ ಆರೋಪ ಹೊತ್ತು ಜೈಲು ಸೇರುತ್ತಾನೆ. ತನ್ನ ಹೆಸರು ಬದಲಾಯಿಸಿ ಜೈಲಿನಲ್ಲಿ ಸಣ್ಣ ಕತೆಗಳನ್ನು ಬರೆಯಲು ತೊಡಗುತ್ತಾನೆ. ಮುಂದೆ ಅದೇ ಹೆಸರಿನಿಂದ ಪ್ರಖ್ಯಾತನಾಗುತ್ತಾನೆ.

## ಜೆ.ವಿ. ಕಾರ್ಲೊ

ಅನುವಾದಕ ಕಾರ್ಲೊ ಪ್ರಸ್ತುತ ಹಾಸನದಲ್ಲಿ ನೆಲೆಸಿದ್ದಾರೆ. ಕಾಲೇಜು ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸಿ ಹಳ್ಳಿಗೆ ಸೇರಿದ್ದ ಅವರನ್ನು ಕಲಾವಿದ ಗೆಳೆಯರಾದ ಕೆ.ಟಿ. ಶಿವಪ್ರಸಾದರು ತಾವು ವಿನ್ಯಾಸ ಮಾಡಲು ಶುರುಮಾಡಿದ ಮನೆಗಳನ್ನು ಕಟ್ಟುವ ಕೆಲಸಕ್ಕೆ ಹಚ್ಚಿದರು. ಅದನ್ನೇ ಈಗಲೂ ಮುಂದುವರೆಸಿಕೊಂಡು ಬಂದಿದ್ದಾರೆ. ಈವರೆಗೆ ಕೆಲವು ಇಂಗ್ಲಿಷ್ ಸಣ್ಣ ಕತೆಗಳನ್ನು ಅನುವಾದಿಸಿದ್ದಾರೆ. ಸುಮಾರು ಮುವತ್ತು ಸಣ್ಣ ಕತೆಗಳು ಪತ್ರಿಕೆ, ಅಂತರ್ಜಾಲಗಳಲ್ಲಿ ಪ್ರಕಟಗೊಂಡಿವೆ. ಕನ್ನಡ ಮಾತ್ರವಲ್ಲದೆ ಕೊಂಕಣಿ ಭಾಷೆಯಲ್ಲಿ ಅವರ ಎಂಬತ್ತಕ್ಕೂ ಹೆಚ್ಚು ಸಣ್ಣ ಕತೆಗಳ ಅನುವಾದಗಳು ಹಾಗೂ ಮೂರು ಕಾದಂಬರಿಗಳು ಧಾರಾವಾಹಿಯಾಗಿ ಪ್ರಕಟವಾಗಿವೆ.